# ಸಭಾ ಸಂಘಟನೆ ಮತ್ತು ಐಕ್ಯತೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದಲ್ಲಿ ಬರುವ ವಚನಗಳು : ಎಫೆಸ** 5:23–27; **ಮತ್ತಾಯ** 20:25–28, **ತೀತ** 1:9; **ಮತ್ತಾಯ** 16:19; **ಗಲಾತ್ಯ** 6:12; **ಮತ್ತಾಯ** 28:18–20.

**ಸ್ಮರಣವಾಕ್ಯ : ನಿಮ್ಮಲ್ಲಿ ಹಾಗಿರಬಾರದು; ಆದರೆ ನಿಮ್ಮಲ್ಲಿ ದೊಡ್ಡವನಾಗ ಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ನಿಮ್ಮಲ್ಲಿ ಮೊದಲನೆಯವನಾಗ ಬೇಕೆಂದಿರುವವನು ನಿಮ್ಮ ಆಳಾಗಬೇಕು. ಮತ್ತಾಯ** 20:26, 27.

ಯೇಸುಕ್ರಿಸ್ತನು ಮಾನವತೆಗೆ ಏನನ್ನು ಸಾಧಿಸಿದ್ದಾನೋ ಅದರಿಂದ ರಕ್ಷಣೆಯು ನಂಬಿಕೆಯು ಮೂಲಕ ಮಾತ್ರವೆಂದು ನಂಬುವ ಪ್ರೊಟೆಸ್ಟೆಂಟ್ ಕ್ರೈಸ್ತರೇ ಅಡ್ವೆಂಟಿಸ್ಟರು. ಯೇಸುಕ್ರಿಸ್ತನು ನಮಗೆ ಏನನ್ನು ಮಾಡಿದ್ದಾನೋ ಅದರಿಂದ ಪ್ರಯೋಜನಗಳನ್ನು ಪಡೆಯಲು ನಮಗೆ ಸಭೆಯಾಗಲಿ, ಸಭೆಯ ಅಧಿಕಾರ ವ್ಯವಸ್ಥೆಯಾಗಲೀ ಅವಶ್ಯಕತೆಯಿಲ್ಲ. ನಾವು ಯೇಸುಕ್ರಿಸ್ತನಿಂದ ಏನನ್ನು ಪಡೆಯುತ್ತೇವೆಯೋ ಅದನ್ನು ನೇರವಾಗಿ ಅವನಿಂದಲೇ ಪಡೆಯುತ್ತೇವೆ. ಆತನು ಶಿಲುಬೆಯ ಮೇಲೆ ನಮ್ಮ ಬದಲಿಯಾಗಿದ್ದಾನೆ ಮತ್ತು ಪರಲೋಕದ ಪರಿಶುದ್ಧ ದೇವದರ್ಶನ ಗುಡಾರದಲ್ಲಿ ನಮ್ಮ ಮಧ್ಯಸ್ಥನಾದ ಮಹಾಯಾಜಕನಾಗಿದ್ದಾನೆ.

ಆದಾಗ್ಯೂ ಸಭೆಯು ದೇವರ ಸೃಷ್ಟಿ, ಇದನ್ನು ದೇವರು ನಮಗಾಗಿ ಇಲ್ಲಿಟ್ಟಿದ್ದಾನೆ. ಇದನ್ನು ನಮ್ಮ ರಕ್ಷಣೆಯ ಮಾಧ್ಯಮನಾಗಿ ಅಲ್ಲ. ಆದರೆ ಲೋಕಕ್ಕೆ ರಕ್ಷಣೆಯನ್ನು ತೋರಿಸುವ ಮತ್ತು ವ್ಯಕ್ತಪಡಿಸಲು ಸಹಾಯ ಮಾಡುವ ವಾಹನವಾಗಿದೆ.

ಸಭೆಯು ಲೋಕಕ್ಕೆ ಸುವಾರ್ತೆಯನ್ನು ಪ್ರಸಾರ ಮಾಡಲು ಯೇಸುಕ್ರಿಸ್ತನು ಮಾಡಿರುವ ಸಂಸ್ಥೆ (ಸಂಘಟನೆ). ಧರ್ಮಪ್ರಚಾರ ಕಾರ್ಯದಲ್ಲಿ ಸಾಗುವುದಕ್ಕೆ ಈ ಸಂಸ್ಥೆಯು ಬಹಳ ಮುಖ್ಯವಾಗಿದೆ.

ಈ ಸಭೆಯೆಂಬ ಸಂಸ್ಥೆಯು (ಸಂಘಟನೆಯು) ಇಲ್ಲದೆ ಹೋದರೆ ಯೇಸುಕ್ರಿಸ್ತನ ಸಂದೇಶವು ಸಾಗಬೇಕಾದ ವೇಗದಲ್ಲಿ ಪರಿಣಾಮಕಾರಿಯಾಗಿ ಸಾಗಲು ಸಾಧ್ಯವಾಗುವುದಿಲ್ಲ. ಸಭೆಯ ನಾಯಕರೂ ಸಹ ಪ್ರಾಮುಖ್ಯ. ಐಕ್ಯತೆಯನ್ನು ಪೋಷಿಸುವುದರಲ್ಲಿ ಯೇಸುಕ್ರಿಸ್ತನ ಉದಾಹರಣೆಗೆ ತಾವೇ ಮಾದರಿಯಾಗುವುದಕ್ಕೆ ಇವರು ಬೇಕು.

ಈ ಸಭೆಯ ಸಂಘಟನೆಯು ಧರ್ಮಪ್ರಚಾರ ಕಾರ್ಯದ ನಿರ್ಣಾಯಕ ಏಕೆ? ಮತ್ತು ಇದು ಸಭೆಯ ಐಕ್ಯತೆಯನ್ನು ಹೇಗೆ ಬೆಳೆಸುತ್ತದೆ? ಎಂಬುದನ್ನು ಈ ವಾರ ಅಧ್ಯಯನ ಮಾಡುತ್ತೇವೆ.

ಡಿಸೆಂಬರ್ 23ನೇ ದಿನಾಂಕದಂದು ಸಬ್ಬತ್ತಿಗೆ ಸಿದ್ಧತೆ ಮಾಡಿಕೊಳ್ಳಲು ಈ ಪಾಠವನ್ನು ಅಧ್ಯಯನ ಮಾಡಿರಿ.

**ಭಾನುವಾರ** **ಡಿಸೆಂಬರ್ 16**

**ಸಭೆಯು ಶಿರಸ್ಸು**

ಈಗಾಗಲೇ ಕಲಿತ ಮುಂಚಿನ ಪಾಠದಲ್ಲಿ ನಾವು ನೋಡಿದಂತೆ ಹೊಸ ಒಡಂಬಡಿಕೆಯಲ್ಲಿ ಸಭೆಯು ದೇಹಕ್ಕೆ ಹೋಲಿಕೆಯಾಗಿದೆ. ಸಭೆಯು ಯೇಸುಕ್ರಿಸ್ತನ ದೇಹ. ಇದು ಒಂದು ರೂಪಕ. ಈ ರೂಪಕವು ಸಭೆಯ ಅನೇಕ ಹೊರ ಸ್ವರೂಪಗಳನ್ನು ಕ್ರಿಸ್ತನಿಗೂ ಆತನ ಜನಗಳಾಗಿರುವ ಸಂಬಂಧವನ್ನು ಪ್ರಸ್ತಾಪಿಸುತ್ತದೆ.

ಸಭೆಯು ಕ್ರಿಸ್ತನ ಶರೀರವಾಗಿರಲಾಗಿ ತನ್ನ ಅಸ್ತಿತ್ವಕ್ಕೆ ಕ್ರಿಸ್ತನನ್ನೇ ಅವಲಂಬಿಸುತ್ತದೆ. ಆತನು ಶಿರಸ್ಸು ಕೊಲಸ್ಸೆ 1:18; ಎಫೆಸ 1:22 ಮತ್ತು ಸಭೆಯ ಜೀವಕ್ಕೆ ಆತನೇ ಮೂಲನಾಗಿದ್ದಾನೆ. ಕ್ರಿಸ್ತನಿಲ್ಲದೆ ಯಾವ ಸಭೆಯು ಇರುವುದಿಲ್ಲ.

ಯೇಸುಕ್ರಿಸ್ತನು ಸಭೆಯ ಮೂಲನು, ಅಸ್ತಿವಾರವು ಮತ್ತು ಅದರ ನಂಬಿಕೆಯು ಉಪದೇಶಗಳಿಗೆ ಸೃಷ್ಟಿಕರ್ತನು ಈತನೇ. ಸಭೆಯು ತನ್ನ ಗುರುತನ್ನು ಕ್ರಿಸ್ತನಿಂದಲೇ ಪಡೆಯುತ್ತದೆ. ಆದಾಗ್ಯೂ ಸಭೆಯು ಇವುಗಳಿಗಿಂತ ಹೆಚ್ಚಿನದು; ಅವು ಅದರ ಆಸ್ತಿತೆಗೆ ಅಷ್ಟೇ ನಿರ್ಣಾಯಕವಾದವುಗಳು.

ಸಭೆಯು ಏನೆಂಬುದನ್ನು ನಿರ್ಧರಿಸುತ್ತದೆ. ಕ್ರಿಸ್ತನು ಮತ್ತು ಸತ್ಯವೇದದಲ್ಲಿ ಆತನ ವಾಕ್ಯವು ಸಭೆಯು ಏನೆಂಬುದನ್ನು ನಿರ್ಧರಿಸುತ್ತದೆ.

ಸಭೆಯೆಂದರೆ ಏನೆಂದು ನಿರ್ಧರಿಸುವ ಆತನ ಪ್ರಕಟನೆಗಳಲ್ಲಿರುವ ವಾಕ್ಯವು ಮತ್ತು ಕ್ರಿಸ್ತನು ಸಭೆಯಾಗಿದ್ದಾನೆ. ಹಾಗಾಗಿ ಸಭೆಯು ತನ್ನ ಆಸ್ತಿತೆಯನ್ನು ಮತ್ತು ಮಹತ್ವವನ್ನು ಕ್ರಿಸ್ತನಿಂದಲೇ ಪಡೆಯುತ್ತದೆ.

**ಎಫೆಸ 5:23–27 ಪೌಲನು ಗಂಡ ಮತ್ತು ಹೆಂಡತಿ ನಡುತೆ ಇರುವ ಸಂಬಂಧವನ್ನೇ ಕ್ರಿಸ್ತನು ಮತ್ತು ಸಭೆಗಿರುವ ಸಂಬಂಧವೆಂದು ಉಪಯೋಗಿಸುತ್ತಾನೆ. ಕ್ರಿಸ್ತನಿಗೂ ಆತನ ಸಭೆಗೂ ಮಧ್ಯವಿರುವ ಸಂಬಂಧಕ್ಕೆ ಮುಖ್ಯವಾದ ಅಭಿಪ್ರಾಯ ಯಾವುವು?**

_______________________________________________

_______________________________________________

_______________________________________________

ಶತಮಾನಗಳಿಂದ ನಾಯಕರುಗಳು ಹೇಗೆ ಸಭೆಯನ್ನು ಕೆಡಿಸಿದ್ದಾರೆ ಎಂಬ ಕಾರಣದಿಂದ ನಾವು ಅದರ ಅಧೀನತೆಯ ಪರಿಕಲ್ಪನೆಯನ್ನು ಇದಕ್ಕೆ ಅನ್ವಯಿಸಲು ಹಿಂಚರಿದರೂ ತಲೆಗೆ, ಕ್ರಿಸ್ತನಿಗೆ ಮತ್ತು ಕ್ರಿಸ್ತನ ಅಧಿಕಾರಕ್ಕೆ ಒಳಪಡಬೇಕು.

ನಾವು ಕ್ರಿಸ್ತನನ್ನು ಸಭೆಯ ತಲೆಯೆಂದು ಒಪ್ಪಿಕೊಳ್ಳುವುದು ನಮ್ಮ ಪರಮ ನಿಷ್ಠೆಯು ಯಾರಿಗೆ ಸೇರುತ್ತದೆ ಎಂದು ಜ್ಞಾಪಕ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. "ಹೌದು ನಿಷ್ಠೆಯು ಕ್ರಿಸ್ತನಿಗೆ ಮಾತ್ರ ಸೇರುತ್ತದೆ ಬೇರೆ ಯಾರಿಗೂ ಅಲ್ಲ.

ಸಭೆಯು ವ್ಯವಸ್ಥಿತಗೊಳ್ಳಬೇಕಾಗಿದೆ. ಆದರೆ ಸಭೆಯ ವ್ಯವಸ್ಥೆಯು ಯಾವಾಗಲೂ ಯೇಸುಕ್ರಿಸ್ತನ ಅಧಿಕಾರಕ್ಕೆ ಅಧೀನವಾಗಿರಬೇಕು. ಆತನೇ ನಮ್ಮ ಸಭೆಯ ನಿಜವಾದ ನಾಯಕ.

ಯೇಸುಕ್ರಿಸ್ತನೆಂಬ ಅಸ್ತಿವಾರದ ಮೇಲೆ ಸಭೆಯು ಕಟ್ಟಲ್ಪಟ್ಟಿದೆ. ಸಭೆಯು ಕ್ರಿಸ್ತನನ್ನು ತನ್ನ ತಲೆಯೆಂದು ಆತನಿಗೆ ವಿಧೇಯನಾಗಿರಬೇಕು. ಸಭೆಯು ಮನುಷ್ಯನ ಮೇಲೆ ಆತುಕೊಳ್ಳಬಾರದು ಇಲ್ಲವೇ ಅವನಿಂದ ನಿಯಂತ್ರಿಸಿಕೊಳ್ಳಬಾರದು.

ಸಭೆಯಲ್ಲಿ ನಂಬಿಕೆಯ ಸ್ಥಾನವು ನಮಗೆ ದಬ್ಬಾಳಿಕೆ ಮಾಡಲು ಮತ್ತು ಇತರರು ಏನನ್ನು ನಂಬಬೇಕು ಮತ್ತು ಏನನ್ನು ಮಾಡಬೇಕೆಂಬ ಅಪ್ಪಣೆಯನ್ನು ಕೂಡುವಂಥಹ ಅಧಿಕಾರವನ್ನು ನೀಡುತ್ತದೆ ಎಂದು ಪ್ರತಿಪಾದಿಸುತ್ತಾರೆ. ಈ ಪ್ರತಿಪಾದನೆಗೆ ದೇವರ ಮಂಜೂರಾತಿ ಇರುವುದಿಲ್ಲ.

ನೀವೆಲ್ಲರೂ ಸಹೋದರರು ಎಲ್ಲರೂ ಶೋಧನೆಗೆ ಒಳಗಾಗುತ್ತೀರಿ ಮತ್ತು ನೀವು ತಪ್ಪು ಎಸಗುವ ಸಾಧ್ಯತೆ ಇದೆಯೆಂದು ರಕ್ಷಕನು ನುಡಿಯುತ್ತಾನೆ. ಎಂದಿಗೂ ಪರಿಮಿತಿಯುಳ್ಳ ಮನುಷ್ಯನನ್ನು ಅವಲಂಬಿಸಬಾರದು. ಅವನಿಂದ ಮಾರ್ಗದರ್ಶನ ಪಡೆದುಕೊಳ್ಳಬಾರದು. ಸಭೆಯಲ್ಲಿ ನಂಬಿಕೆಯೆಂಬ ಬಂಡೆಯೇ ಕ್ರಿಸ್ತನ ಜೀವಂತ

ಪ್ರಸನ್ನತೆಯಾಗಿದೆ.

ಸಭೆಯಲ್ಲಿ ನಂಬಿಕೆಯ ಬಂಡೆಯು ಕ್ರಿಸ್ತನ ಜೀವಂತ ಪ್ರಸನ್ನತೆಯಾಗಿದೆ. ಈ ಬಂಡೆಯ ಮೇಲೆ ಒಬ್ಬ ನಿರ್ಬಲನು ನಂಬಿಕೆ ಇಡಬಹುದು ಯಾರ್‍ಯಾರು ತಮ್ಮನ್ನು ತಾವೇ ಬಲಾಢ್ಯರು ಎಂದುಕೊಳ್ಳುತ್ತಾರೆ (ಅವರು ತುಂಬ ನಿರ್ಬಲರು ಎಂದು ಸಾಬೀತು ಪಡಿಸುತ್ತಾರೆ) ಯೇಸುಕ್ರಿಸ್ತನನ್ನು ತಮ್ಮ ಕಾರ್ಯಸಾಧಕನನ್ನಾಗಿ ಮಾಡಿಕೊಳ್ಳದಿದ್ದರೆ ಅವರೇ ತುಂಬ ಬಲಹೀನರೆಂದು ಸಾಬೀತಾಗುತ್ತಾರೆ. ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಏಜಸ್, ಪುಟ 414 ರಲ್ಲಿ ನಾವು ಸುಲಭವೆಂದು

**ಮನುಷ್ಯನನ್ನು ಆತುಕೊಳ್ಳದೆ ಕ್ರಿಸ್ತನನ್ನು ಆತುಕೊಳ್ಳುವುದನ್ನು ಹೇಗೆ ಕಲಿಯುತ್ತೇವೆ?**

**ಸೋಮವಾರ** **ಡಿಸೆಂಬರ್ 17**

**ಸೇವಕನ ನಾಯಕತ್ವ**

ಯೇಸುಕ್ರಿಸ್ತನು ತನ್ನ ಶಿಷ್ಯರೊಂದಿಗೆ ಸುವಾರ್ತಾ ಸೇವೆಯಲ್ಲಿ ತೊಡಗಿರುವಾಗ ಆತನ ಶಿಷ್ಯರು ಅಧಿಕಾರಕ್ಕೆ ಅಯಾಸೆ ಪಟ್ಟುದುದಕ್ಕೆ ಆತನಿಗೆ ಬಹುಶಃ ಬಹಳ ಸಲ ಕೆರಳಿದ ಅನುಭವವಾಗಿರುತ್ತದೆ.

ಯೇಸುಕ್ರಿಸ್ತನ ರಾಜ್ಯದಲ್ಲಿ ಅಧಿಕಾರವುಳ್ಳ ನಾಯಕರಾಗಬೇಕೆಂಬ ಕಾತರತೆ ತುಂಬಿದವರಂತೆ ಕಾಣುತ್ತಿದ್ದರು (ಮಾರ್ಕ್ 9:33, 34, ಲೂಕ 9:46).

ಕರ್ತನ ರಾತ್ರಿ ಭೋಜನಕೂಟದಲ್ಲಿ ಒಟ್ಟಾಗಿ ಪಾಲ್ಗೊಂಡಿದ್ದಾಗಲೂ ಅವರಲ್ಲಿ ದರ್ಪದ ಮತ್ತು ಮೇಲರಿಮೆಯ ಭಾವನೆಗಳನ್ನು ಅವರ ಮಧ್ಯದಲ್ಲಿ ಅನುಭವಿಸಿದರು (ಲೂಕ 22:24).

**ಅಂತಹ ಒಂದು ಸಂದರ್ಭದಲ್ಲಿ ಯೇಸುಕ್ರಿಸ್ತನು ಆಧ್ಯಾತ್ಮಿಕ ನಾಯಕತ್ವದ ಬಗ್ಗೆ ಅವನ ಆಲೋಚನೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾನೆ. ನಾಯಕತ್ವದ ಯಾವ ತತ್ವಗಳನ್ನು ಯೇಸುಕ್ರಿಸ್ತನ ಎಚ್ಚರಿಕೆಯ ಮಾತುಗಳಿಂದ ಕಲಿಯಬಹುದಾಗಿದೆ (ಮತ್ತಾಯ 20:25–28).**
**ನಾವು ಈ ಸೀಮವನ್ನು ನಮ್ಮ ಜೀವಿತಗಳಲ್ಲಿ ವಿಶೇಷವಾಗಿ ಸಭೆಯಲ್ಲಿ ಹೇಗೆ ತೋರಿಸಬಹುದು?**

–––––––––––––––––––––––––––––––––––––––––––

–––––––––––––––––––––––––––––––––––––––––––

ಈ ಒಂದು ಸಂಕ್ಷಿಪ್ತವಾದ ವಿವರಣೆಯಲ್ಲಿ ಯೇಸು ಎರಡು ಬಗೆಯ ಅಧಿಕಾರವನ್ನು ನಮ್ಮೊಂದಿಗೆ ವಿವರಿಸಿದ್ದಾನೆ. ಮೊದಲನೆಯದು ರೋಮನ್ನರಿಗಿದ್ದ ಅಧಿಕಾರದ ಕಲ್ಪನೆ. ಈ ಮಾದರಿಯ ಅಧಿಕಾರದಲ್ಲಿ ತನ್ನನ್ನು ಬೇರೆಯವರ ಮೇಲೆ ಹೆಚ್ಚಿಸಿಕೊಂಡವನ ಕ್ರಮಾನುಗತ (ಶ್ರೇಣೀಕೃತ) ಅಧಿಕಾರವಿದೆ. ಯಾರ್‍ಯಾರು ಅವರ ಕೈಕೆಳಗೆ ಬರುತ್ತಾರೋ ಅವರಿಂದ ನಮ್ರತೆಯನ್ನು ನಿರೀಕ್ಷಿಸುತ್ತಾರೆ. ಮತ್ತು ನಿರ್ಧಾರಗಳನ್ನು ಮಾಡುವುದಕ್ಕೂ ಅಧಿಕಾರವನ್ನು ಹೊಂದಿರುತ್ತಾರೆ. ಯೇಸುಕ್ರಿಸ್ತನು ಈ ರೀತಿಯಾದ ಅಧಿಕಾರದ ಮಾದರಿಯನ್ನು ತಿರಸ್ಕರಿಸಿದನು. ನಿಮ್ಮಲ್ಲಿ ಹಾಗಿರಬಾರದು ಎಂದು ಹೇಳಿದನು. ಇದಕ್ಕೆ ಬದಲಾಗಿ ಆತನು ಶಿಷ್ಯರಿಗೆ ಉಸಿರು ಕಟ್ಟಿಸುವಂತಹ ಅಧಿಕಾರದ ಹೊಸ ಮಾದರಿಯನ್ನು ಅವರ ಮುಂದಿಟ್ಟನು. ಈ ಮಾದರಿಯ ಅಧಿಕಾರದ ಬಗ್ಗೆ ಅವರಿಗೆ ಪೂರ್ಣ ಅರಿವಿತ್ತು. ಇದನ್ನು ಯೇಸುಕ್ರಿಸ್ತನು ಸಂಪೂರ್ಣವಾಗಿ ನಿರಾಕರಿಸಿ ವಿರುದ್ಧವಾದುದನ್ನು ಶ್ರೇಣಿಕೃತ ಅಧಿಕಾರದ ಮಾದರಿಯನ್ನು ಅವರಿಗೆ ಹೇಳಿದನು. ಡರಿಯಸ್ ಜನಕೈಲೆಸ್, ಯೇಸುಕ್ರಿಸ್ತನಂತೆ ಸೇವೆ ಮಾಡುವುದು ಅಡ್ವೆಂಟಿಸ್ಟ್ ರಿವ್ಯೂ, ಮಾರ್ಚ್ 2018, ಪುಟ 18.

ಯೇಸುಕ್ರಿಸ್ತನು ಅಧಿಕಾರದ ಪರಿಕಲ್ಪನೆ ಬಗ್ಗೆ ಹೇಳುವ ಈ ಕಥೆಯಲ್ಲಿ ಎರಡು ಮುಖ್ಯಪದಗಳಿವೆ. ಸೇವಕ ಮತ್ತು ದಾಸ.

ಕೆಲವು ಸತ್ಯವೇದಗಳಲ್ಲಿ ಸೇವಕ ಎಂಬುದನ್ನು ಮಿನಿಸ್ಟರ್ ಎಂದು ಮತ್ತು ಕೆಲವು ಸತ್ಯವೇದಗಳಲ್ಲಿ ಸೇವಕ ಎಂದು ಉಪಯೋಗಿಸಲಾಗಿದೆ. ಆದಾಗ್ಯೂ ಕ್ರಿಸ್ತನು ಎಲ್ಲಾ ತರದ ಅಧಿಕಾರದ ಸ್ವರೂಪಗಳನ್ನು ರದ್ದು ಮಾಡಲಿಲ್ಲ. ಆತನು ಸಭೆಯ ನಾಯಕರುಗಳು ಎಲ್ಲಕ್ಕೂ ಮೊದಲು ದೇವರ ಮಕ್ಕಳ ಸೇವಕರೂ ದಾಸರೂ ಆಗಿರಬೇಕೆಂದು ಒತ್ತಿಹೇಳಲು ಆಸೆಪಟ್ಟನು.

ಅವರ ಸ್ಥಾನಗಳು ಅಧಿಕಾರವನ್ನು ಜನರ ಮೇಲೆ ಚಲಾಯಿಸುವುದಕ್ಕಲ್ಲ, ಅಥವಾ ಜನರನ್ನು ಬಲವಂತವಾಗಿ ಆಳುವುದಕ್ಕಲ್ಲ ಅಥವಾ ಪ್ರತಿಷ್ಠೆಗೂ ಜನಪ್ರಿಯತೆಗೂ ತಮ್ಮನ್ನು ಒಪ್ಪಿಸುವುದಕ್ಕಲ್ಲ. ಯೇಸುಕ್ರಿಸ್ತನು ಇದಕ್ಕಿಂತ ಭಿನ್ನವಾದ ತತ್ವಗಳ ಮೇಲೆ ತನ್ನ ರಾಜ್ಯವನ್ನು ಕಟ್ಟಿದ್ದಾನೆ. ಆತನು ಮನುಷ್ಯರನ್ನು ಅಧಿಕಾರಕ್ಕಾಗಿ ಕರೆಯದೆ ಸೇವೆಗಾಗಿ ಕರೆದನು. ಬಲವುಳ್ಳವನು ಬಲಯಿಲ್ಲದವನ ಅಶಕ್ತತೆಗಳನ್ನು ಹೊತ್ತುಕೊಳ್ಳುವುದಕ್ಕೆ ಕರೆದನು. ಅಧಿಕಾರ, ಸ್ಥಾನ, ತಲಾಂತು, ಶಿಕ್ಷನ ಇವುಗಳನ್ನೆಲ್ಲಾ ಹೊಂದಿದವರು ಸಹಜೀವಿಗಳ ಸೇವೆಯನ್ನು ಮಾಡುವ ಹಂಗಿನಲ್ಲಿದ್ದಾರೆ.
ಇ.ಜಿ. ವೈಟ್, ದಿ ಡಿಸೈರ್ ಆಫ್ ಏಜಸ್, ಪುಟ 550

**ಯೋಹಾನ 13:1–20ನ್ನು ಓದಿರಿ. ನಾಯಕತ್ವದ ಯಾವ ಉದಾಹರಣೆಗಳನ್ನು ಯೇಸುವು ತನ್ನ ಶಿಷ್ಯರಿಗೆ ಕೊಟ್ಟನು? ಈ ಉದ್ಧೃತಭಾಗದಲ್ಲಿ ಯೇಸುಕ್ರಿಸ್ತನು ನಮಗೆ ಏನನ್ನು ಕಲಿಸಲು ಪ್ರಯತ್ನಿಸುತ್ತಾನೆ? ಸಭೆಯ ಒಳಗೆ ಹೊರಗೆ ಇತರರೊಡನೆ ನಾವು ನಮ್ಮ ಎಲ್ಲಾ ಕೆಲಸಗಳಲ್ಲಿ ಹೇಗೆ ಈ ತತ್ವವನ್ನು ತೋರಿಸಬಹುದು?**

**ಮಂಗಳವಾರ** **ಡಿಸೆಂಬರ್, 18**

**ಸಭೆಯ ಐಕ್ಯತೆಯನ್ನು ಸಂರಕ್ಷಿಸುವುದು**

**ತಿಮೊಥೆ 2:15 ಮತ್ತು ತೀತ 1:9ನ್ನು ಓದಿರಿ. ತಿಮೊಥೆ ಮತ್ತು ತೀತನಿಗೆ ಪೌಲನು ಕೊಟ್ಟಿರುವ ಬುದ್ಧಿವಾದಗಳ ಪ್ರಕಾರ ಒಬ್ಬ ನಂಬಿಗಸ್ತನಾದ ನಾಯಕನು ಮತ್ತು ಹಿರಿಯನು ಯಾವ ನಿರ್ಣಾಯಕ ಕೆಲಸಗಳ ಜವಾಬ್ದಾರಿಯನ್ನು ಹೊರಬೇಕು?**

––––––––––––––––––––––––––––––––––––––––––––

––––––––––––––––––––––––––––––––––––––––––––

––––––––––––––––––––––––––––––––––––––––––––

ಪೌಲನು ಸ್ವಸ್ಥಬೋಧನೆಗಳನ್ನು ಮತ್ತು ಉಪದೇಶಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬೇಕೆಂದು ಎಷ್ಟು ಒತ್ತಿ ಹೇಳುತ್ತಿದ್ದಾನೆ ಗಮನಿಸಿ. ಇದು ಐಕ್ಯತೆಗೆ ನಿರ್ಣಾಯಕವಾಗಿವೆ ಯಾಕೆಂದರೆ ಯಾವುದಕ್ಕಿಂತಲೂ ಹೆಚ್ಚಾಗಿ ನಮ್ಮ ಉಪದೇಶಗಳು ನಮ್ಮ ಸಭೆಯನ್ನು ಒಂದುಗೂಡಿಸುತ್ತದೆ ಎಂಬುದಾಗಿ ಒಬ್ಬನು ವಾದಮಾಡಬಹುದು. ಅಡ್ವೆಂಟಿಸ್ಟರಾದ ನಾವು ಜೀವನದ ಎಲ್ಲಾ ಕ್ಷೇತ್ರಗಳಿಂದ, ಹಿನ್ನೆಗಳಿಂದ, ಸಂಸ್ಕೃತಿಗಳಿಂದ ಬಂದವರಾಗಿದ್ದೇವೆ. ಕ್ರಿಸ್ತನು ಕೊಟ್ಟ ಸತ್ಯಗಳನ್ನು ಅರ್ಥಮಾಡಿಕೊಂಡರೆ ಕ್ರಿಸ್ತನ ಐಕ್ಯತೆಯಲ್ಲಿ ಇರುತ್ತೇವೆ. ನಾವು ಈ ಸತ್ಯಗಳ ವಿಷಯದಲ್ಲಿ ಗಲಿಬಿಲಿ ಪಟ್ಟುಕೊಂಡರೆ ಗೊಂದಲ ಮತ್ತು ಭಿನ್ನತೆಗಳು ಬರುತ್ತವೆ ವಿಶೇಷವಾಗಿ ನಾವು ಅಂತ್ಯಕ್ಕೆ ಹತ್ತಿರವಾಗುತ್ತಿರುವಾಗ ಬರುತ್ತವೆ. 2ತಿಮೊ 4:1–4 "ದೇವರ ಮುಂದೆ ಮತ್ತು ಜೀವಿಸುವವರಿಗೂ ಸತ್ತವರಿಗೂ ನ್ಯಾಯ ತೀರಿಸುವುದಕ್ಕೆ ಬರುವ ಕ್ರಿಸ್ತಯೇಸುವಿನ ಮುಂದೆ ಆತನ ಪ್ರತ್ಯಕ್ಷತೆಯ ಮೇಲೆಯೂ ಆತನ ರಾಜ್ಯದ ಮೇಲೆಯೂ ಆಣೆಯಿಟ್ಟು ನಾನು ನಿನಗೆ ಖಂಡಿತವಾಗಿ ಹೇಳುವುದೇನೆಂದರೆ– ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು. ಯಾಕೆಂದರೆ ಜನರು ಸ್ವಸ್ಥಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ; ಅದರಲ್ಲಿ ಅವರು ಕೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ

ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು. ಅವರು ಸತ್ಯಬೋಧನೆಗೆ ಕಿವಿಗೊಡದೆ ಕಲ್ಪನಾಕಥೆಗಳನ್ನು ಕೇಳುವುದಕ್ಕೆ ಹೋಗುವರು. ಆದರೆ ನೀನು ಎಲ್ಲಾ ವಿಷಯಗಳಲ್ಲಿ ಸ್ವಸ್ಥಚಿತ್ತನಾಗಿರು, ಶ್ರಮೆಯನ್ನು ತಾಳಿಕೋ, ಸೌವಾರ್ತಿಕನ ಕೆಲಸವನ್ನು ಮಾಡು, ನಿನಗೆ ನೇಮಿಸಿರುವ ಸೇವೆಯನ್ನು ಲೋಪವಿಲ್ಲದೆ ನಡಿಸು. ಈ ವಾಕ್ಯಗಳೊಂದಿಗೆ, ಪೌಲನು ಯೇಸುಕ್ರಿಸ್ತನ ಎರಡನೆಯ ಬರೋಣದ ವಿಷಯದಲ್ಲೂ ನ್ಯಾಯವಿಚಾರಣೆಯ ವಿಷಯದಲ್ಲೂ ತನಗೆ ಪ್ರೇರಿತ ಆಲೋಚನೆಗಳಿಗೆ ಗಮನವನ್ನು ಕೇಂದ್ರೀಕರಿಸುತ್ತಾನೆ. ಪೌಲನು ತಿಮೋಥೆಗೆ ಮುಖ್ಯವಾದ ಸಮಲೋಚನೆ ಕೊಡಲು ತನಗೆ ದೇವರು ಕೊಟ್ಟ ಪೂರ್ಣ ಅಧಿಕಾರವನ್ನು ಉಪಯೋಗಿಸುತ್ತಿದ್ದಾನೆ (1 ತಿಮೊ 1:1) ತಿಮೊಥೆಗೆ ಅಂತ್ಯದಿನಗಳ ಸಂದರ್ಭದಲ್ಲಿ ಸುಳ್ಳು ಉಪದೇಶಗಳು ತುಂಬಿರುವ, ಅನೀತಿಯು ಹೆಚ್ಚಾಗುತ್ತಿರುವ ಕಡೆಯ ದಿನಗಳ ಸಂದರ್ಭದಲ್ಲಿ ತಿಮೊಥೆಯು ದೇವರ ವಾಕ್ಯವನ್ನು ಬೋಧಿಸಬೇಕಾಗಿದೆ. ಈ ಸೇವೆ ಮಾಡುವುದಕ್ಕೆ ದೇವರಿಂದ ಕರೆಯಲ್ಪಟ್ಟಿದ್ದಾನೆ. ಬೋಧಿಸುವುದು ಸೇವೆಯ ಒಂದು ಭಾಗವಾಗಿ ತಿಮೊಥೆಯು ಜನರನ್ನು ಒಪ್ಪಿಸಬೇಕು. ಗದರಿಸಬೇಕು ಮತ್ತು ಎಚ್ಚರಿಸಬೇಕು. ಈ ಕ್ರಿಯಾ ಸೂಚಕ ಪದಗಳು ಪರಿಶುದ್ಧ ವಾಕ್ಯಗಳು ಕೊಡುವ ಮಾರ್ಗದರ್ಶನಕ್ಕೆ ಜ್ಞಾಪಕಗಳಾಗಿವೆ (2 ತಿಮೊ 3:16).

ತಿಮೊಥೆಯನು ಪರಿಶುದ್ಧ ವಾಕ್ಯದಲ್ಲಿ ಏನನ್ನು ಕಂಡುಕೊಂಡನೋ ಅದನ್ನು ತಾಳ್ಮೆಯಿಂದಲೂ, ದೀರ್ಘಶಾಂತಿಯಿಂದಲೂ ಕಾರ್ಯರೂಪಕ್ಕೆ ಕ್ರೂರವಾದ ಮತ್ತು ತೀಕ್ಷ್ಣವಾದ ಗದರಿಕೆಗಳು ಬಹಳ ಅಪರೂಪಕ್ಕೆ ಪಾಪಿಯನ್ನು ಕ್ರಿಸ್ತನೆಡೆಗೆ ತರುತ್ತದೆ. ಪೌಲನು ಯಾವುದನ್ನು ಬರೆದನೋ ಅದನ್ನು ಅನುಸರಿಸಬೇಕು. ಅದನ್ನು ಪವಿತ್ರಾತ್ಮನ ಮಾರ್ಗದರ್ಶಕ ಸೇವಕ, ನಾಯಕನ ಮನೋಭಾವದಿಂದ ಅನುಸರಿಸಬೇಕು. ಹಾಗಾದರೆ ತಿಮೋಥೆಯು ಸಭೆಯಲ್ಲಿ ಐಕ್ಯತೆಯನ್ನು ತರುವ ಒಂದು ದೊಡ್ಡ ಬಲವಾಗಿದ್ದಾನೆ.

**ನಾವು ಸಭೆಯಲ್ಲಿ ಐಕ್ಯತೆಯನ್ನು ಉಂಟುಮಾಡುವ ನಾಯಕರಿಗೆ ಪ್ರಾಯೋಗಿಕವಾಗಿ ಸಹಾಯ ಮಾಡುವ ಮಾರ್ಗಗಳಾವುವು?**

**ಬುಧವಾರ** **ಡಿಸೆಂಬರ್**, 19

**ಸಭೆಯ ಶಿಸ್ತು**

ಸಭಾ ಸಂಸ್ಥೆಯ ಅನೇಕ ವಿವಾದಗಳಲ್ಲಿ ಶಿಸ್ತಿನಿಂದ ವ್ಯವಹರಿಸುವುದು ಒಂದು. ಕೆಲವು ವೇಳೆ ಸಭೆಯ ಐಕ್ಯತೆಯನ್ನು ಶಿಸ್ತು ಹೇಗೆ ಕಾಪಾಡುತ್ತದೆ ಎಂಬುದು ಬಹಳ ಸೂಕ್ಷ್ಮವಾದ ಮತ್ತು ಸುಲಭವಾಗಿ ಮನಸ್ತಾಪ ಮಾಡಿಕೊಳ್ಳುವ ವಿಷಯವಾಗಿದೆ.

ಆದರೆ ಸತ್ಯವೇದದ ದೃಷ್ಟಿಕೋನದಲ್ಲಿ ಸಭೆಯ ಶಿಸ್ತು ಎರಡು ವಿಷಯಗಳಲ್ಲಿ ಕೇಂದ್ರೀಕೃತವಾಗುತ್ತದೆ ಒಂದು ತತ್ವಬೋಧನೆಯಲ್ಲಿ ಶುದ್ಧತೆಯನ್ನು ಕಾಪಾಡುವುದು ಮತ್ತೊಂದು ಸಭೆಯ ಜೀವ ಮತ್ತು ಅಭ್ಯಾಸಗಳಲ್ಲಿ ಶುದ್ಧತ್ವವನ್ನು ಕಾಪಾಡುವುದು.
ನಾವು ಈಗಗಲೇ ಹೊಸ ಒಡಂಬಡಿಕೆಯ ಸತ್ಯವೇದದ ಉಪದೇಶಗಳ ಶುದ್ಧತ್ವ ಕಾಪಾಡುವುದರ ಪ್ರಾಮುಖ್ಯತೆಯನ್ನು ಧರ್ಮಭ್ರಷ್ಟತೆ ಮತ್ತು ಸುಳ್ಳು ಬೋಧನೆಗಳು ಅನುಸರಿಸುತ್ತವೆ.
ಸಮುದಾಯವನ್ನು ಅನೈತಿಕ, ಅಪ್ರಮಾಣಿಕ, ದುಷ್ಟತೆಗಳ ವಿರುದ್ಧವಾಗಿ ಅದರ ಗೌರವಾರ್ಹತೆಯನ್ನು ಕಾಯಬೇಕಾಗುತ್ತದೆ. ಆದಕಾರಣ ಪರಿಶುದ್ಧ ವಾಕ್ಯವು ಹೀಗೆ ಹೇಳುತ್ತದೆ. ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ, ಖಂಡನೆಗೂ, ತಿದ್ದುಪಾಟಿಗೂ, ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ. 2 ತಿಮೊ 3:16.

**ಮತ್ತಾಯ 16:19 ಮತ್ತು 18:15–20 ಓದಿರಿ.**
**ತಪ್ಪು ಮಾಡಿದವರಿಗೆ ಬುದ್ಧಿ ಹೇಳುವ ವಿಷಯದಲ್ಲೂ ಯಾವ ನಿಯಮಗಳನ್ನು ಕ್ರಿಸ್ತನು ಸಭೆಗೆ ಕೊಟ್ಟನು?**

——————————————————————————————

——————————————————————————————

ಸತ್ಯವೇದವು ಶಿಸ್ತಿನ ಪರಿಕಲ್ಪನೆಯನ್ನು ಬೆಂಬಲಿಸುತ್ತದೆ ಮತ್ತು ನಮ್ಮ ಅಧ್ಯಾತ್ಮಿಕ, ನೈತಿಕ ಜೀವಿತದಲ್ಲಿ ಪರಸ್ಪರ ಜವಾಬ್ದಾರಿಕೆಯನ್ನು ಬೆಂಬಲಿಸುತ್ತದೆ. ಸತ್ಯವೇನೆಂದರೆ ಸಭೆಯನ್ನು ಪ್ರತ್ಯೇಕ ಪಡಿಸುವ ಅನೇಕ ಗುರುತುಗಳಲ್ಲಿ ಪರಿಶುದ್ಧತೆ ಅಥವಾ ಲೋಕದಿಂದ ಪ್ರತ್ಯೇಕವಾಗಿರುವುದು ಸಹ ಒಂದು ಗುರುತು.

ಸಭೆಯು ನಿರ್ಣಾಯಕವಾಗಿ ಅನೈತಿಕ ವರ್ತನೆಗಳ ವಿರುದ್ಧ ಕಾರ್ಯವೆಸಗುವ ಅನೇಕ ಕಠಿಣ ಸಂದರ್ಭಗಳನ್ನು ಸತ್ಯವೇದದ ಅನೇಕ ಉದಾಹರಣೆಗಳಲ್ಲಿ ಖಂಡಿತವಾಗಿಯೂ ಕಾಣುತ್ತೇವೆ. ನೈತಿಕ ಪ್ರಮಾಣಗಳನ್ನು ಸಭೆಯಲ್ಲಿ (ಕಾಪಾಡಿಕೊಳ್ಳಬೇಕು) ಪಾಲಿಸಬೇಕು.

**ಸಭೆಯಲ್ಲಿ ಕಷ್ಟಕರವಾದ ವಿವಾದಗಳನ್ನು ಕುರಿತು ಮಾತಾಡುವಾಗ ಯಾವ ನಿಯಮಗಳನ್ನು ನಾವು ಪಾಲಿಸಬೇಕೆಂದು ಈ ವಚನಗಳು ನಮಗೆ ಬೋಧಿಸುತ್ತವೆ. ಮತ್ತಾಯ** 7:1–15; **ಗಲಾ** 6:12.

——————————————————————————————

——————————————————————————————

ಸಭೆಯ ಶಿಸ್ತಿನ ಬಗೆಗೆ ಇರುವ ಸತ್ಯವೇದ ಬೋಧನೆಗಳನ್ನು ನಾವು ನಿರಾಕ–ರಿಸಲಾಗುವುದಿಲ್ಲ. ಇದನ್ನು ಬಿಟ್ಟರೆ ನಾವು ದೇವರ ವಾಕ್ಯಕ್ಕೆ ವಿಧೇಯರಾಗುವುದಕ್ಕಾಗುವುದಿಲ್ಲ, ಆದರೆ ಈ ಎಲ್ಲಾ ಎಚ್ಚರಿಕೆಗಳಲ್ಲಿ ವಿಮೋಚನೆಯ ಗುಣವನ್ನು ಗಮನಿಸಿರಿ. ಶಿಸ್ತುಕ್ರಮ ಸಾಧ್ಯವಾದಷ್ಟು ಮಟ್ಟಿಗೆ ವಿಮೋಚನ ಕರವಾಗಿರಬೇಕು.

**ನಾವು ತಪ್ಪು ಮಾಡುವವರ ಸಂಗಡ ವ್ಯವಹರಿಸುವಾಗ ಅವರಿಗೆ ಶಿಕ್ಷೆ ಕೊಡುವ ಧೋರಣೆಗಿಂತಲೂ ವಿಮೋಚನೆಯ ಧೋರಣೆಯಿಂದ ಕಾರ್ಯಗಳನ್ನು ಮಾಡಲು ಹೇಗೆ ಕಲಿಯುತ್ತೇವೆ?**

**ಗುರುವಾರ** **ಡಿಸೆಂಬರ್** 20

**ಧರ್ಮಪ್ರಚಾರ ಕಾರ್ಯಕ್ಕೆ ಸಂಘಟಿತವಾಗುವುದು**

ಧರ್ಮಪ್ರಚಾರ ಕಾರ್ಯದಿಂದ ಹೊರಗಿನವರನ್ನು ತಲುಪಲು ನಾವು ಸಭೆಯಾಗಿ ಸಂಘಟಿತರಾಗಿದ್ದೇವೆ ಮತ್ತು ಬಂದುಗೂಡಿದ್ದೇವೆ.
ನಾವು ಕೇವಲ ಒಂದು ಸಾಮಾಜಿಕ ಕೂಟವಲ್ಲ ಸಮಾನಮನಸ್ಕರು ಒಟ್ಟಾಗಿ ಸೇ–ರಿಕೊಂಡು ನಾವು ಒಬ್ಬರಿಗೊಬ್ಬರು ಏನನ್ನು ನಂಬುತ್ತೇವೆ ಎನ್ನುವುದನ್ನು ಖಾತ್ರಿ ಪಡಿಸುವುದಕ್ಕಲ್ಲ (ಇದು ಕೂಡ ಮುಖ್ಯವಾದದಾಗಿರುತ್ತದೆ). ನಾವೇ ಲೋಕಕ್ಕೆ ಸತ್ಯವನ್ನು ಹಂಚುವುದಕ್ಕಾಗಿ ಒಟ್ಟಾಗಿ ಸೇರಿದ್ದೇವೆ.

**ಮತ್ತಾಯ 28:18–20 ಯೇಸುವು ಲೋಕಕ್ಕೆ ಶಿಷ್ಯರು ಮಾಡಬೇಕಾದ ಧರ್ಮಪ್ರಚಾರ ಕಾರ್ಯದ ವಿಷಯದಲ್ಲಿ ಅಂತಿಮ ಆದೇಶಗಳನ್ನು ಅವರಿಗೆ ಕೊಟ್ಟನು. ಯೇಸುವಿನ ಆಜ್ಞೆಯಲ್ಲಿರುವ ಮುಖ್ಯವಾದ ಪದಗಳನ್ನು ಗುರುತಿಸಿರಿ. ಇಂದಿನ ಸಭೆಗೆ ಈ ಪದಗಳು ಏನನ್ನು ಸೂಚಿಸುತ್ತವೆ?**

____________________________________________

____________________________________________

ತನ್ನ ಶಿಷ್ಯರು ಮಾಡಬೇಕೆಂದು ಯೇಸು ಕೊಟ್ಟ ಆದೇಶದಲ್ಲಿ ನಾಲ್ಕು ಮುಖ್ಯಪದಗಳಿವೆ ಹೋಗಿರಿ, ಶಿಷ್ಯರನ್ನು ಮಾಡಿರಿ, ದೀಕ್ಷಾಸ್ನಾನ ಮತ್ತು ಉಪದೇಶ. ಈ ಪದಗಳು ಗ್ರೀಕ್ ವ್ಯಾಕರಣದ ಪ್ರಕಾರ ಮುಖ್ಯವಾದ ಕ್ರಿಯಾಪದ 'ಶಿಷ್ಯರನ್ನು ಮಾಡಿರಿ' ಇನ್ನುಳಿದ ಪದಗಳು ಇದನ್ನು ಹೇಗೆ ಮಾಡಬಹುದೆಂಬುದನ್ನು ಸೂಚಿಸುತ್ತವೆ.

ವಿಶ್ವಾಸಿಗಳು ಎಲ್ಲಾ ಕಡೆ ಹೋಗಿ ಜನರಿಗೆ ಸುವಾರ್ತೆಯನ್ನು ಸಾರಿದಾಗ

ಆ ಜನರಿಗೆ ದೀಕ್ಷಾಸ್ನಾನ ಮಾಡಿಸಿದಾಗ ಮತ್ತು ಅವರಿಗೆ ವಾಕ್ಯಗಳನ್ನು ಉಪದೇಶ ಮಾಡಿದಾಗ ಶಿಷ್ಯರು ಉಂಟಾದರು.

ಸಭೆಯು ಕ್ರಿಸ್ತನ ಆದೇಶಕ್ಕೆ ಸ್ಪಂದಿಸಲಾಗಿ ದೇವರ ರಾಜ್ಯವು ಬೆಳೆಯುತ್ತಾ ಹೋಯ್ತು. ಎಲ್ಲಾ ದೇಶದ ಜನರು ಹೆಚ್ಚೆಚ್ಚಾಗಿ ಯೇಸುವನ್ನು ರಕ್ಷಕನನ್ನಾಗಿ ಅಂಗೀಕ–ರಿಸುವವರೊಟ್ಟಿಗೆ ಸೇರಿದರು.

ಅವರಿಗೆ ದೀಕ್ಷಾಸ್ನಾನ ಮಾಡಿಸಿರಿ ಮತ್ತು ನಾನು ಹೇಳಿದ ಉಪದೇಶಗಳನ್ನು ಅವ–ರಿಗೆ ಕಲಿಸಿರಿ ಎಂಬ ಆಜ್ಞೆಗೆ ಅವರು ವಿಧೇಯತೆ ತೋರಿಸಿದಾಗ ಬಂದು ಸಾರ್ವತ್ರಿಕ ಕುಟುಂಬವು ಉಂಟಾಯಿತು.

ಹೊಸ ಶಿಷ್ಯರಿಗೂ ಯೇಸುಕ್ರಿಸ್ತನ ಪ್ರಸನ್ನತೆ ಕೊಡೋಣವಾಯ್ತು ಆವಾಗ ಹೊಸ ಹೊಸ ಶಿಷ್ಯರು ಮಂಡಲಿಗೆ ಸೇರುತ್ತಾ ಬಂದರು. ಯೇಸುಕ್ರಿಸ್ತನ ಪ್ರಸನ್ನತೆಯು ದೇವರ ಪ್ರಸನ್ನತೆಯ ವಾಗ್ದಾನವಾಗಿತ್ತು.

ಮತ್ತಾಯನ ಸುವಾರ್ತೆಯು ಯೇಸುಕ್ರಿಸ್ತನ ಜೀವನದ ಪ್ರಕಟನೆ. "ದೇವರು ನಮ್ಮ ಸಂಗಡವಿದ್ದಾನೆ" ಎಂಬ ವಾಕ್ಯದಿಂದ ಆರಂಭವಾಗುತ್ತದೆ (ಮತ್ತಾಯ 1:23). ಇದು ಯೇಸುಕ್ರಿಸ್ತನು ಯುಗದ ಸಮಾಪತಿಯವರೆಗೂ ಇರುತ್ತೆನೆ ಎಂಬ ಅದೇ ವಾಗ್ದಾನದೊಂದಿಗೆ ಮುಗಿಯುತ್ತದೆ.

ಕ್ರಿಸ್ತನು ತನ್ನ ಶಿಷ್ಯರಿಗೆ ತಾನು ಆಜ್ಞಾಪಿಸಿದ ಕೆಲಸವು ಸುಲಭವಾದುದೆಂದು ಹೇಳಲಿಲ್ಲ. ತಾನೆಂದೆಂದು ಶಿಷ್ಯರೊಂದಿಗೆ ಇರುತ್ತೇನೆಂದು ಅವರಿಗೆ ಭರವಸೆ ಕೊಟ್ಟನು. ಅವರು ನಂಬಿಕೆಯಿಂದ ಮುಂದೆ ಮುಂದೆ ಸಾಗಿದರೆ ಅವರು ಸರ್ವಶಕ್ತನ ಗುರಾಣಿಯಡಿಯಲ್ಲಿ ಮುಂದೆ ಸಾಗಬೇಕು. ಕ್ರಿಸ್ತನು ತನ್ನ ಶಿಷ್ಯರನ್ನು ಧೈರ್ಯವಾಗಿರಿ ಬಲಗೊಳ್ಳಿರಿ ಎಂದು ಅವರಿಗೆ ಹೇಳಿದನು. ದೇವದೂತರಿಗಿಂತಲೂ ಶಕ್ತನಾಗಿರುವವನು ಪರಲೋಕದ ದೂತಸೈನ್ಯದ ಸೇನಾಧಿಪತಿಯು ಅವರೊಂದಿಗಿದ್ದಾನೆ. ಕ್ರಿಸ್ತನು ಅವರೊಂದಿಗಿದ್ದು ಅವರ ಕೆಲಸವನ್ನು ಮುಂದುವರೆಸಿ ಮುನ್ನೆಡುಸುವುದಕ್ಕೆ ಬೇಕಾದ ಪೂರ್ಣ ಮುನ್ನೇರ್ಪಾಟನ್ನು ಮಾಡಿದನು ಮತ್ತು ಅವರು ಮಾಡುವ ಕೆಲಸಕ್ಕೆ ಪೂರ್ಣ ಯಶಸ್ಸನ್ನು ಕೊಡುವ ಜವಾಬ್ದಾರಿಯನ್ನು ಸಹ ತಾನೇ ತೆಗೆದುಕೊಂಡನು.

ಎಲ್ಲಾ ಕೆಲಸಗಳಲ್ಲಿ ಅವನೊಂದಿಗೆ ಸಂಪರ್ಕದಲ್ಲಿದ್ದು ಎಲ್ಲಿಯವರೆಗೆ ಶಿಷ್ಯರು ಅವನ ಮಾತುಗಳಿಗೆ ವಿಧೇಯರಾಗುತ್ತಾರೋ ಅವರು ಸೋಲುವ ಹಾಗೇ ಇಲ್ಲ. ಇ.ಜಿ. ವೈಟ್ "ದಿ ಆಕ್ಟ್ಸ್ ಆಫ್ ದಿ ಅಪೋಸ್ತಲ್ಸ್" ಪುಟ 29.

ಯೇಸುಕ್ರಿಸ್ತನು ಎರಡನೆಯ ಸಲ ಬರುವವರೆಗೆ ತಾನು ತನ್ನ ಜನರೊಂದಿಗೆ ಇರುತ್ತೇನೆಂಬ ವಾಗ್ದಾನದ ಅರ್ಥದ ಮೇಲೆ ಚಿಂತನೆ ಮಾಡಿರಿ.

ಯೇಸುಕ್ರಿಸ್ತನಿಂದ ನಮಗೆ ಕೊಡಲ್ಪಟ್ಟಿರುವ ಆದೇಶವು ನೆರವೇರಬೇಕೆಂದು ಬಯಸುವಾಗ

ಯೇಸುಕ್ರಿಸ್ತನ ಈ ವಾಗ್ದಾನದ ವಾಸ್ತಾವಿಕತೆಯು ನಮ್ಮ ಮೇಲೆ ಹೇಗೆ ಬಲವಾದ ಪರಿಣಾಮವನ್ನು ಬೀರುತ್ತದೆ?

**ಶುಕ್ರವಾರ** **ಡಿಸೆಂಬರ್** 21

**ಹೆಚ್ಚಿನ ಚಿಂತನೆ** : E.G. White (1) ವೈಯಕ್ತಿಕ ಜವಾಬ್ದಾರಿಕೆ ಮತ್ತು ಕ್ರೈಸ್ತ ಐಕ್ಯತೆ ಪುಟ 485–505.

2. Testimonies to Ministers & Gospel Workers, Unity in Diversity, PP 483-485 & Church Discipline PP 498-503.

3. Gospel workers - Church PP 707-710

4. Church organisation PP 712-714.

5. E.G. White Encyclopedia.

ಸಭೆಯು ಸೇರಿದಂತೆ ಉತ್ತಮ ನಾಯಕತ್ವದ ನಿಯಮಗಳು ಎಲ್ಲಾ ಬಗೆಯ ಸಮಾಜಕ್ಕೂ ಅನ್ವಯವಾಗುತ್ತದೆ. ಆದಾಗ್ಯೂ ಸಭೆಯಲ್ಲಿರುವ ನಾಯಕನು ಇತರೆನಾಯಕರುಗಳಿಗಿಂತ ಹೆಚ್ಚಿನವನಾಗಿದ್ದಾನೆ. ಆತನು ಸೇವಕನೂ ಸಹಾ ಆಗಿದ್ದಾನೆ.

* ನಾಯಕನಾಗಿರುವುದಕ್ಕೂ ಸೇವಕನಾಗಿರುವುದಕ್ಕೂ ಮಧ್ಯೆ ಎದ್ದು ಕಾಣುವ ವಿರೋಧವಿದೆ. ಒಬ್ಬನು ಹೇಗೆ ಏಕಕಾಲದಲ್ಲಿ ನಾಯಕನೂ ಸೇವಕನೂ ಆಗಿರಬಹುದು?

* ಒಬ್ಬ ನಾಯಕನು ಗೌರವಾನ್ವಿತ ಸ್ಥಾನವನ್ನು ಪಡೆಯಬಾರದೆ?

* ಆತನು ಇತರರನ್ನು ವಿಧೇಯರಾಗುವಂತೆ ಆಜ್ಞಾಪಿಸುತ್ತಾನಲ್ಲವೆ?

* ಹಾಗಾದರೆ ಆತನು ಹೇಗೆ ಸೇವಕನಾಗಿ ಕೆಳಗಿನ ಸ್ಥಾನವನ್ನು ಅಲಂಕರಿಸಿ ಅಪ್ಪಣೆಗಳನ್ನು ಅಂಗೀಕರಿಸಿ ಅವುಗಳನ್ನು ನೆರವೇರಿಸುತ್ತಾನೆ?

* ಈ ವಿರೋಧ ಭಾಸವನ್ನು ಬಗೆಹರಿಸಲು ನಾವು ಕ್ರಿಸ್ತನೆಡೆಗೆ ನೋಡಬೇಕು.

* ಸೇವೆಯನ್ನು ಮಾಡುವಂತಹ ನಾಯಕತ್ವದ ನಿಯಮಗಳನ್ನು ಆತನು ಅತಿಶಯವಾಗಿ ಪ್ರತಿನಿಧಿಸುತ್ತಾನೆ.

* ಆತನ ಪೂರ್ಣ ಜೀವನವೇ ಸೇವೆಯಾಗಿತ್ತು. ಅದೇ ಸಮಯದಲ್ಲಿ ಆತನು ಈ ಲೋಕ ಕಂಡ ಮಹಾನಾಯಕನಾಗಿದ್ದಾನೆ.

– G. Arthur Keough, 'Our church today' What it is

and can be (Washington DC and Nashville, Review and Herald 1980) P 106.

**ಚರ್ಚಿಸಬೇಕಾದ ಪ್ರಶ್ನೆಗಳು**

1. ಸೇವಕ ನಾಯಕ ಎಂಬ ಆಲೋಚನೆಯ ಮೇಲೆ ಹೆಚ್ಚಾಗಿ ತಂಗೋಣ. ಇಂತಹ ಉದಾಹರಣೆಗಳನ್ನು ಈ ಜಾತ್ಯಾತೀತ ಲೋಕದಲ್ಲಿ ಕಾಣಬಹುದೆ?

2. ಮತ್ತಾಯ 20:25–28ನ್ನು ಮತ್ತೆ ಓದಿರಿ. ದೇವರು ಹೇಗೆ 'ಮಹಾನ್' ಎಂಬ ಪದದ ಅರ್ಥವನ್ನು ಅರಿತುಕೊಂಡಿದ್ದಾನೆ ಎಂಬುದರ ಬಗ್ಗೆ ಇದು ಏನನ್ನು ಹೇಳುತ್ತದೆ? (ಮತ್ತಾಯ 20:26) ವ್ಯತಿರಿಕ್ತವಾಗಿ. ಇದನ್ನು ಲೋಕವು ಹೇಗೆ ಅಥ–ರ್ಮಾಡಿಕೊಳ್ಳುತ್ತದೆ?

3. ಸಭೆಯ ನಾಯಕರುಗಳ ಕೆಲಸ ಸಭೆಯ ಐಕ್ಯತೆಯನ್ನು ಸಂರಕ್ಷಿಸುವುದು ಎನ್ನುವುದಾದರೆ ಅವರ ಮಾನವತ್ವವು ಅವರನ್ನು ಪರಿಪೂರ್ಣರನ್ನಾಗಿಸಲು ತಡೆಯುತ್ತದೆ ಎಂಬ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ಸಭೆಯ ನಾಯಕರುಗಳೇ ತಪ್ಪಿಸಗಿದಾಗ ಏನು ಮಾಡಬೇಕು?

4. ತಪ್ಪು ಮಾಡುವವರ ವಿಷಯದಲ್ಲಿ ಸಭೆಯು ಶಿಸ್ತುಕ್ರಮವನ್ನು ಜರುಗಿಸುವಾಗ ಅದು ಅವನ ಬಗ್ಗೆ ಸೌಜನ್ಯಪೂರ್ವಕವಾಗಿಯೂ ಪ್ರೀತಿಯಿಂದಲೂ ನಡೆದುಕೊಳ್ಳುವುದು ಯಾಕೆ ಪ್ರಾಮುಖ್ಯವಾಗಿದೆ? ಮತ್ತಾಯ 7:12. ಯಾವಾಗಲೂ ಶಿಸ್ತುಕ್ರಮದ ಪ್ರಕ್ರಿಯೆಯಲ್ಲೂ ಮತ್ತಾಯ 7:12 ನಮ್ಮ ಮನಸ್ಸಿಗೆ ಮುಂದಾಗಿ ಬರುತ್ತದೆ ಯಾಕೆ?

**ಸಾರಾಂಶ** : ಒಳ್ಳೆಯ ಸಭಾ ಸಂಘಟನೆಯು ಸಭೆಯ ಸುವಾರ್ತಾ ಸೇವೆಗೂ ವಿಶ್ವಾಸಿಗಳ ಐಕ್ಯತೆಗೂ ಅತ್ಯಗತ್ಯವಾಗಿದೆ. ಕ್ರಿಸ್ತನು ಸಭೆಗೆ ಶಿರಸ್ಸು ಸಭೆಯ ನಾಯಕರು ಕ್ರಿಸ್ತನನ್ನು ಅನುಸರಿಸಿ ನಡೆಯಬೇಕು. ಯಾಕೆಂದರೆ ಅವರು ದೇವರ ಮಕ್ಕಳನ್ನು ನಡಿಸುವವರಾಗಿದ್ದಾರೆ. ದೇವರ ವಾಕ್ಯದ ಪ್ರಾಮಾಣಿಕ ಬೋಧನೆಯಿಂದ ಮತ್ತು ಆ ವಾಕ್ಯಕ್ಕೆ ಪ್ರಾಮಾಣಿಕವಾಗಿ ಜೀವಿಸುವುದರ ಮೂಲಕ ಐಕ್ಯತೆಯನ್ನು ಕಾಪಾಡಿಕೊಳ್ಳಬಹುದು.